ಸಾಕ್ಷಿಯನ್ನು ಇಂದು ದಿನಾಂಕ 24/06/2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಶ್ರೀ. ಪ್ರತಿವಾದಿ ಪರ ಎಸ್.ಆರ್.ಜೆ ವಕೀಲರಿಂದ

2. ವಾದಿಯು ವಾದ ಪತ್ರದ ಜೋತೆ ಹಾಜರು ಪಡಿಸಿದ ಹಾತನಕಾಶೆಯನ್ನುನೋಡಿ ನಾನೇ ಹಾಜರುಪಡಿಸಿದ ಹಾತ ನಕಾಶೆ ಎಂದು ನುಡಿಯುತ್ತಾರೆ. ಇ.ಎಫ್. ಹಾತನಕಾಶೆಯಲ್ಲಿ ತೋರಿಸಲಾದ ಇ.ಎಫ್. ಭಾಗದಲ್ಲಿ ಒಡ್ಡು ಇದೆ ಎಂದರೆ ಸರಿ. ಇ.ಎಫ್. ಒಡ್ಡಿದ ಪೂರ್ವಕ್ಕೆ ಇರುವುದ ಪ್ರತಿವಾದಿಯರ ಜಮೀನು ಹಾಗೂ ಅದರ ಪಶ್ಚಿಮಕ್ಕೆ ನಮ್ಮ ಜಮೀನು ಇದೆ ಎಂದರೆ ಸರಿ. ಸದರಿ ಇ.ಎಫ್. ಒಡ್ಡು ವಾದಿಯರದು ಹಾಗೂ ಪ್ರತವಾದಿಯರದು ಸಾಮೂಹಿಕ ಒಡ್ಡು ಎಂದರೆ ಸರಿಯಲ್ಲ. ಸದರಿ ಪಿ. ಎಫ್. ಕ್ಷೇತ್ರದಲ್ಲಿ ಯಾವುದೆ ಒಡ್ಡು ಇಲ್ಲ ಎಂದರೆ ಸರಿಯಲ್ಲ. ಬಿ.ಎಫ್. ಒಡ್ಡುನ್ನು ಪ್ರತಿವಾದಿಯರು 2014 ರಲ್ಲಿ ಡಿಸೆಂಬರದಿಂದ ನಾಶಮಾಡುತ್ತ ಬಂದಿರುತ್ತಾರೆ. ಸದರಿ ನಾಶಪಡಿಸಿದರ ಬಗ್ಗೆ ನಾವು ದೂರನ್ನು ನೀಡಿಲ್ಲ. ಸಾಕ್ಷಿಯು ಮುಂದುವರೆದು ನಾವು ದೂರುನ್ನು ನೀಡಲು ಹೋದಾಗ ಹಿರಿಯರು ನ್ಯಾಯಾ ಮಾಡುತ್ತೇವೆ ಎಂದಾಗ ದೂರನ್ನು ನೀಡಿಲ್ಲಿ. ಹಿರಿಯರ ಹೆಸರು ಕಲ್ಲಪ್ಪ ಹಾಗೂ ಸಂಗಪ್ಪ ನಡುಕಟ್ಟಿಯವರು ಹೀಗೆ ಹೇಳಿದರು. ಇಬ್ಬರೂ ಜೀವಂತ ಇದ್ದಾರೆ ಎಂದರೆ ಸರಿ. ಪ್ರತಿವಾದಿಯರು ಜೆ.ಸಿ.ಪಿ.ಯಿಂದ ನಾಶಪಡಿಸಿದ ಒಡ್ಡು ಸದರಿ ಜೆ.ಸಿ.ಪಿ.ಯ ಸಂಖ್ಯೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಜೆ.ಸಿ.ಪಿ.ಯ ಮಾಲೀಕ ಮೋಹನ ಚವ್ಹಾಣ ಎಂದು ಹೇಳುತ್ತಾರೆ. ನಾನು ಜೆ.ಸಿ.ಬಿ. ಮಾಲೀಕನ ಮೇಲೆ ದೂರನ್ನು ನೀಡಿಲ್ಲಿ. ಸದರಿ XY ತೀರುವು ಪ್ರತಿವಾದಿಯರ ಜಮೀನದಲ್ಲಿ ಇದೆ ಎಂದರೆ ಸರಿಯಲ್ಲ. ಸಮಾನ್ಯವಾಗಿ ಜೋರಾಗಿ ಮಳೆ ಬಂದರೆ ಹಳ್ಳ ತೀರುವು ಪಡಿಯುತ್ತದೆ ಎಂದರೆ ಸರಿಯಲ್ಲ. ಅದರಿಂದ ಪ್ರಾಕೃತಿಕವಾಗಿ ತೀರುವು ಎಮ್.ಎನ್.ದಿಂದ ಎಕ್ಸ್.ವಾಯ್ ಗೆ ಪಡೆದಿದೆ ಎಂದರೆ ಸರಿಯಲ್ಲ. ಸದರಿ ತಿರವು ಪ್ರಾಕೃತಿಕವಾಗಿದರಿಂದ ಸರ್ವೆ ನಂ. 1307 ಜಮೀನನ ಉತ್ತರ ದಿಕ್ಕಿನಲ್ಲಿರುವ ಮಾಲೀಕರು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ. ಸುಮಾರು 15-20 ವರ್ಷದಿಂದ ನಮಗೆ ಹಾಗೂ ಪ್ರತಿವಾದಿಯರಿಗೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸನ್. 2012-13 ರಲ್ಲಿ ವಿಜಯಪುರದಲ್ಲಿ ಬಾರಿ ಮಳೆ ಆಗಿದ್ದರಿಂದ ಸದರಿ ಹಳ್ಳ ಪ್ರಾಕೃತಿಕ ತಿರಿವು ಪಡೆದುಕೊಂಡಿದೇ ಎಂದರೆ ಸರಿಯಲ್ಲ. ನಮಗೆ ಹಾಗೂ ಪ್ರತಿವಾದಿಯರಿಗೆ ವೈಮನಸ್ಸು ಇದ್ದ ಕಾರಣ ಪ್ರತಿವಾದಿಯರೆ ಜೆ.ಸಿ.ಬಿ.ಯಿಂದ ಹಳ್ಳವನ್ನು ತೀರುವು ಪಡಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ಇ.ಬಿ.ಎಫ್. ಭಾಗದಲ್ಲಿ ಒಡ್ಡನ್ನು ಹಾಗೂ ಗಿಡ-ಗಂಟೆಗಳನ್ನು ಕಡದಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇ.ಬಿ.ಎಫ್. ಭಾಗದಲ್ಲಿ ತೀರುವು ಪಡೆದ ಹಳ್ಳದ ಅಳತೆ ಅಗಲ-10 ಮೀ ಹಾಗೂ ಉದ್ದ-150 ಪೀಟ ಅಳತೆದು ಆಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಎಮ್.,ಎನ್ ಭಾಗದಿಂದ ಎಕ್ಸ ಬಾಗಕ್ಕೆ

ಹಳ್ಳನ್ನು ಸ್ಥಳಾಂತರಿಸಲು ಸುಮಾರು ಅಂದಾಜು ರೂ. 10 ಸಾವಿರ ಬರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಎಕ್ಸ ವಾಯ್.ದಿಂದ ಹಳ್ಳವು ಉತ್ತರ ದಿಕ್ಕಿಗೆ ಮುಂದುವರೆದಿದೆ ಎಂದರೆ ಸರಿ. ಸದರಿ ಎಕ್ಸ.ವಾಯ್ ಹಳ್ಳವು ಉತ್ತರ ದಿಕ್ಕಿನಲ್ಲಿ ಮುಂದುವರೆದು ಇನ್ನೂ 3 ಜಮೀನುಗಳಿಗೆ ಹೋಗಿದೆ. ಸದರಿ ಪ್ರಕರಣದಲ್ಲಿ ಹಳ್ಳ ಅಪ್ರಾಕೃತಿಕ ವಾಗಿ ತಿರುವು ಪಡೆದಿದ್ದರಿಂದ ಮನಾಯಿ ಹುಕುಂ ಕೇಳಾಗಿದೆ ಕೇವಲ ಘೋಷಣೆ ಪರಿಹಾರ ಕೇಳಿದ್ದರಿಂದ ದಾವೆಯು ಉರ್ಜಿತವಾಗುವದಿಲ್ಲ ಎಂದುರೆ ಸಾಕ್ಷಿಯು ನನಗೆ ಕಾನೂನು ಗೊತ್ತಿಲ್ಲ ಎಂದು ಹೇಳುತ್ತಾರೆ. ಸುಮಾರು 80 ವರ್ಷಗಳಿಂದ ಎಮ್.ಎನ್.ಭಾಗದಿಂದ ಭಾಗದಲ್ಲಿ ಹರಿಯುವ ಹಳ್ಳವು ಪಶ್ಚಿಮಕ್ಕೆ ಸರಿಯುತ್ತ ಬಂದು ಎಸ್.ವಾಯ್ ಬಾಗಕ್ಕೆ ಹರಿಯುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಮೇಲೆ ದ್ವೇಷ ಸಾದಿಸುವ ಸುಲುವಾಗಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತದದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಬಸವನ ಬಾಗೇವಾಡಿ.